ಈ ಯೋಜನೆಯ ಉಸ್ತುವಾರಿಕೆಯನ್ನು ಆಗಿಂದಾಗ್ಗೆ ಪರಿಶೀಲಿಸುವುದು. ಪಟ್ಟಣ ಮಟ್ಟದಲ್ಲಿ ಸ್ಪಿಯರಿಂಗ್ ಕಮಿಟಿಗಳು ಜಿಲ್ಲಾಧಿಕಾರಿಗಳು, ಪೌರಸಂಸ್ಥೆಗಳ ಆಯುಕ್ತರು / ಮುಖ್ಯಾಧಿಕಾರಿಗಳು ಹಾಗೂ ಚುನಾಯಿತ ಸದಸ್ಯರು, ಸರ್ಕಾರೇತರ ಸಂಸ್ಥೆಗಳು, ಸಮುದಾಯ ಗುಂಪುಗಳನ್ನೊಳಗೊಂಡಿದ್ದು, ಈ ಯೋಜನೆಯನ್ನು ಆಗಿಂದಾಗ್ಗೆ ಪರಿಶೀಲಿಸಿ ಪಾರದರ್ಶಿಕತೆ ಮತ್ತು ಗುಣ ಮಟ್ಟಗಳ ಉಸ್ತುವಾರಿಯನ್ನು ವಹಿಸುವರು.

ಅಧ್ಯಕ್ಷರು : ಮಂಡಿಸಲಾಯಿತು.

ದಿ : 23.3.2000ರ ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರ್ತಿಲ್ಲದ ಪ್ರಶ್ನೋತ್ತರಗಳನ್ನು ಮಂಡಿಸುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 22-03-2000ರಂದು ಪ್ರಶ್ನೋತ್ತರ ವೇಳೆ ನಡೆಯದೇ ಇದ್ದುದರಿಂದ ಆ ದಿನದ ಚುಕ್ಕೆ ಗುರುತಿನ 3ನೇ ಪಟ್ಟಿಯ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳಿಗೆ ಮತ್ತು ಚುಕ್ಕೆ ಗುರುತಿಲ್ಲದ 100 ಪ್ರಶ್ನೆಗಳ ಪೈಕಿ 80ಕ್ಕೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ರಾಜ್ಯದ ಮಹಿಳಾ ವೈದ್ಯರ ಹುದ್ದೆಗಳ ವಿವರ

33 - ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ಇರುವ ತಾಲ್ಲೂಕು ಆಸ್ಪತ್ರೆಗಳ ಮತ್ತು ಪ್ರಾ. ಆ. ಕೇಂದ್ರಗಳ ಸಂಖ್ಯೆ ಎಷ್ಟೆಷ್ಟು ಮತ್ತು ಅವು ಯಾವುವು?

ಆ) ರಾಜ್ಯದಲ್ಲಿರುವ ಒಟ್ಟು ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಇ) ಅವುಗಳ ಪೈಕಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಈ) ಖಾಲಿ ಇರುವ ಹುದ್ದೆಗಳನ್ನು ತುಂಬದಿರಲು ಕಾರಣವೇನು?

ಉ) ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಸಚಿವರು) :

ಅ) 77 ಪಟ್ಟಿ ಲಗತ್ತಿಸಿದೆ.

ಆ) 835

ಇ) 105

ಈ) ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಬಹುತೇಕ ಮಹಿಳಾ ವೈದ್ಯಾಧಿಕಾರಿಗಳು ಪುರುಷ ವೈದ್ಯಾಧಿಕಾರಿಗಳ ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ.

ಉ) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಖಾಲಿ ಇರುವ ಮಹಿಳಾ ತಜ್ಞರ / ಹಿರಿಯ ತಜ್ಞರ ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ ಬರುವ ವೈದ್ಯರಗಳನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಮಹಿಳಾ ವೈದ್ಯರ ಹುದ್ದೆಗಳನ್ನು ಕೆ.ಹೆಚ್.ಎಸ್.ಡಿ.ಪಿ. ಅಧೀನದಲ್ಲಿ 573 ವೈದ್ಯರುಗಳನ್ನು ನೇಮಕ ಮಾಡುವ ಸಮಯದಲ್ಲಿ ಶೇಕಡ 30ರಷ್ಟು ಹುದ್ದೆಗಳನ್ನು ಮಹಿಳಾ ವೈದ್ಯಾಧಿಕಾರಿಗಳಿಗೆ ಮೀಸಲಾತಿ ನೀಡಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ನೇಮಕಾತಿಯು ಪ್ರಕ್ರಿಯೆಯಲ್ಲಿದೆ.

ತಾಲ್ಲೂಕು ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಮಹಿಳಾ ವೈದ್ಯಾಧಿಕಾರಿ ಹುದ್ದೆಗಳ ವಿವರ

ಬೆಂಗಳೂರು ನಗರ ಜಿಲ್ಲೆ: ಮತ್ತು ಗ್ರಾಮಾಂತರ ಜಿಲ್ಲೆ :

1. ಪ್ರಾಥಮಿಕ ಆರೋಗ್ಯ ಕೇಂದ್ರ, ವರ್ತೂರು
2. -"- ಅನೇಕಲ್
3. -"- ಸೋಲೂರು
4. -"- ದೊಡ್ಡಮುದುವಾವಾಡಿ

ಕೋಲಾರ ಜಿಲ್ಲೆ

5. ಪ್ರಾಥಮಿಕ ಆರೋಗ್ಯ ಕೇಂದ್ರ ಬಾಗೇಪಲ್ಲಿ
6. ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ
7. ಪ್ರಾಥಮಿಕ ಆರೋಗ್ಯ ಕೇಂದ್ರ, ನಾಮಗೊಂಡ್ಲು
8. ಪ್ರಾಥಮಿಕ ಆರೋಗ್ಯ ಕೇಂದ್ರ, ಮಾರ್ಗಾನುಕುಂಟೆ

ತುಮಕೂರು ಜಿಲ್ಲೆ

9. ಸಾರ್ವಜನಿಕ ಆಸ್ಪತ್ರೆ, ತಿಪಟೂರು
10. -"- ಮಧುಗಿರಿ
11. -"- ಕೊರಟಗೆರೆ
12. ಪ್ರಾಥಮಿಕ ಆರೋಗ್ಯ ಕೇಂದ್ರ, ತುರುವೇಕೆರೆ
13. -"- ಬರಗೂರು
14. -"- ಕೋಟೆಗುಡ್ಡ

ಶಿವಮೊಗ್ಗ ಜಿಲ್ಲೆ :

15. ಸಾರ್ವಜನಿಕ ಆಸ್ಪತ್ರೆ, ಹೊಸನಗರ

ಚಿತ್ರದುರ್ಗ ಜಿಲ್ಲೆ :

16. ಪ್ರಾಥಮಿಕ ಆರೋಗ್ಯ ಕೇಂದ್ರ, ಸಿರಿಗೆರೆ
17. -"- ನಾಯಕನಹಟ್ಟಿ
18. ಸಾರ್ವಜನಿಕ ಆಸ್ಪತ್ರೆ, ಹೊಸದುರ್ಗ

ದಾವಣಗೆರೆ ಜಿಲ್ಲೆ :

19. ಸಾರ್ವಜನಿಕ ಆಸ್ಪತ್ರೆ, ಹರಿಹರ
20. -"- ಹರಪ್ಪನಹಳ್ಳಿ
21. -"- ಚನ್ನಗಿರಿ

ಚಾಮರಾಜನಗರ ಜಿಲ್ಲೆ :

22. ಪ್ರಾಥಮಿಕ ಆರೋಗ್ಯ ಕೇಂದ್ರ, ಯಳಂದೂರು
23. ಸಾರ್ವಜನಿಕ ಆಸ್ಪತ್ರೆ ಗುಂಡ್ಲುಪೇಟೆ.

ಮಂಡ್ಯ ಜಿಲ್ಲೆ :

24. ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ

ಚಿಕ್ಕಮಗಳೂರು ಜಿಲ್ಲೆ :

25. ಪ್ರಾಥಮಿಕ ಆರೋಗ್ಯ ಕೇಂದ್ರ ಪಂಚನಹಳ್ಳಿ
26. -"- ಲಕ್ಕವಳ್ಳಿ
27. -"- ದಾರದಹಳ್ಳಿ
28. -"- ಬಣಕಲ್
29. -"- ಸಕರಾಯಪಟ್ಟಣ
30. -"- ಅಲ್ಲೂರು

ಹಾಸನ ಜಿಲ್ಲೆ :

31. ಪ್ರಾಥಮಿಕ ಆರೋಗ್ಯ ಕೇಂದ್ರ, ಪಡುವಲಹಿಪ್ಪೆ
32. -"- ಕೇರಳಾಪುರ
33. -"- ಹತ್ತಿಹಳ್ಳಿ

34. ಪ್ರಾಥಮಿಕ ಆರೋಗ್ಯ ಕೇಂದ್ರ, ಯಸಳೂರು

35. ಸಾರ್ವಜನಿಕ ಆಸ್ಪತ್ರೆ, ಬೇಲೂರು

ಗುಲ್ಬರ್ಗಾ ಜಿಲ್ಲೆ :

36. ಸಾರ್ವಜನಿಕ ಆಸ್ಪತ್ರೆ, ಚಿಂಚೋಳಿ

37. -"- ಜೇವರ್ಗಿ

38. -"- ಸುರಪುರ

39. ಪ್ರಾಥಮಿಕ ಆರೋಗ್ಯ ಕೇಂದ್ರ, ಇಜೇರಿ

40. -"- ಯರಗೋಲ

41. -"- ದೋರನಹಳ್ಳಿ

ರಾಯಚೂರು ಜಿಲ್ಲೆ :

42. ಸಾರ್ವಜನಿಕ ಆಸ್ಪತ್ರೆ, ಮಾನ್ವಿ

43. -"- ದೇವದುರ್ಗ

ಕೊಪ್ಪಳ ಜಿಲ್ಲೆ :

44. ಪ್ರಾಥಮಿಕ ಆರೋಗ್ಯ ಕೇಂದ್ರ, ಕವಲೂರು

45. ಸಾರ್ವಜನಿಕ ಆಸ್ಪತ್ರೆ, ಯಲಬುರ್ಗಾ

46. -"- ಕುಷ್ಟಗಿ

ಬಳ್ಳಾರಿ ಜಿಲ್ಲೆ :

47. ಪ್ರಾಥಮಿಕ ಆರೋಗ್ಯ ಕೇಂದ್ರ, ಕಂಪ್ಲಿ

48. -"- ಸಿರಗುಪ್ಪ

49. -"- ಹಂಪಸಾಗರ

ಹಾವೇರಿ ಜಿಲ್ಲೆ :

50. ಸಾರ್ವಜನಿಕ ಆಸ್ಪತ್ರೆ, ಹಾನಗಲ್

51. ಪ್ರಾ. ಆ. ಕೇಂದ್ರ, ಅಕ್ಕಿಆಲೂರ

ಧಾರವಾಡ ಜಿಲ್ಲೆ :

52. ಸಾರ್ವಜನಿಕ ಆಸ್ಪತ್ರೆ, ನವಲಗುಂದ

53. ಪ್ರಾಥಮಿಕ ಆರೋಗ್ಯ ಕೇಂದ್ರ, ಅಳ್ನಾವರ.

ಬಿಜಾಪುರ ಜಿಲ್ಲೆ :

54. ಪ್ರಾ. ಆ. ಕೇಂದ್ರ, ಒಬಲೇಶ್ವರ
55. -"- ಕಲಕೇರಿ
56. -"- ಚಡಚಣ

ಬಾಗಲಕೋಟೆ ಜಿಲ್ಲೆ :

57. ಪ್ರಾಥಮಿಕ ಆರೋಗ್ಯ ಕೇಂದ್ರ, ಕಲಾದಗಿ
58. -"- ಹುನಗುಂದ
59. -"- ಸೂಳೆಬಾವಿ
60. -"- ಪಟ್ಟದಕಲ್
61. -"- ಕೆರೂರ
62. -"- ಗಲಗಲಿ
63. -"- ಲೋಕಾಪುರ
64. -"- ಸಾವಳಗಿ
65. ಸಾರ್ವಜನಿಕ ಆಸ್ಪತ್ರೆ, ಇಳಕಲ್
66. -"- ಗುಳೇದಗುಡ್ಡ.

ಕಾರವಾರ ಜಿಲ್ಲೆ :

67. ಪ್ರಾಥಮಿಕ ಆರೋಗ್ಯ ಕೇಂದ್ರ, ಹಳಗ
68. -"- ಅಂಗಡಿ
69. -"- ಹಿರೇಗುತ್ತಿ
70. -"- ಗೋಕರ್ಣ
71. -"- ಬಂಕಿಕೊಡ್ಲ
72. -"- ಶಿರಾಲಿ
73. -"- ಕಾದಗಿ
74. -"- ಮುಂಡಗೋಡ
75. -"- ಜೋಯಿಡಾ

ಗದಗ ಜಿಲ್ಲೆ :

76. ಪ್ರಾಥಮಿಕ ಆರೋಗ್ಯ ಕೇಂದ್ರ, ಮುಳುಗುಂದ
77. ಸಾರ್ವಜನಿಕ ಆಸ್ಪತ್ರೆ, ಶಿರಪಟ್ಟಿ.